ಪರಂಪರೆಯ ಹರಿವನ್ನು ಹೀರಿಕೊಂಡಿದೆ. ಮುಖ್ಯವಾಗಿ ಫ್ರೆಂಚ್, ರಷಿಯನ್, ಇಂಗ್ಲಿಷ್, ಬಂಗಾಳಿ ಮತ್ತು ಹಿಂದಿ ಮೂಲಗಳಿಂದ ಬಗೆ ಬಗೆಯ ಆಧುನಿಕ ಸಿದ್ಧಾಂತಗಳಿಂದ ಪ್ರೇರಿತವಾದ ಸೃಜನಶೀಲ ಹುಡುಕಾಟವು ಮುನ್ನಲೆಗೆ ಬಂತು. ಇವತ್ತಿನ ಆಧುನಿಕೋತ್ತರ ಸಂದರ್ಭದಲ್ಲಿ, ಸದ್ಯದ ನೇಪಾಳಿ ಕಾವ್ಯವು ಒಂದು ಸ್ಥಳೀಯ ಧ್ವನಿಯನ್ನು ಕಟ್ಟಿಕೊಂಡಿದೆ ಅನಿಸುತ್ತೆ. ಅದು ನೇಪಾಳದ ಸಂಸ್ಕೃತಿಗೆ ವಿಶಿಷ್ಟವಾದ ಸಮಾಜೋ- ರಾಜಕೀಯ ವಾಸ್ತವದಲ್ಲಿ ಬೇರುಬಿಟ್ಟಿದೆ. ರಾಜಕೀಯ ಹೋರಾಟಗಳು, ರಾಷ್ಟ್ರೀಯತೆಯ ಚರ್ಚೆ ಮತ್ತು ಸಾಮಾಜಿಕ ಪ್ರಜ್ಞೆಯ ಪಥವು, ತಾತ್ವಿಕತೆ ಮತ್ತು ಸೌಂದರ್ಯಾನುಭೂತಿಯ ಚೌಕಟ್ಟಿನಲ್ಲಿ ನೇಪಾಳಿ ಕಾವ್ಯವನ್ನು ರೂಪಿಸುವ ಮಾರ್ಗದರ್ಶಿ ಶಕ್ತಿಯಾಗಿವೆ. ಇಂದಿನ ಕಾವ್ಯಲೋಕವು ಗುರುತಿಸುವಿಕೆ ಮತ್ತು ಅಸ್ತಿತ್ವದ ಹೋರಾಟಗಳನ್ನು ಹಿಡಿದಿಟ್ಟುಕೊಳ್ಳುವ ಗುಣಲಕ್ಷಣಗಳನ್ನು ಹೆಚ್ಚು ಹೆಚ್ಚು ಮೈಗೂಡಿಸಿಕೊಳ್ಳುತ್ತಿದೆ. ಮೂಲೆಗುಂಪಾದ ಸಮುದಾಯಗಳು, ಅದು ಮಹಿಳೆಯರೇ ಇರಬಹುದು, ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿರಬಹುದು ಅಥವಾ ಪ್ರಾಂತೀಯವಾಗಿ ಮತ್ತು ಭಾಷಿಕವಾಗಿ ತುಳಿತಕ್ಕೆ ಒಳಗಾದವರಿರಬಹುದು, ಹೊಸ ಉತ್ಸಾಹದಿಂದ ಕಾವ್ಯವನ್ನು ಒಂದು ಕ್ರಿಯಾತ್ಮಕ ಬದಲಾವಣೆಯ ಗುಣದೊಂದಿಗೆ ಆವರಿಸಿಕೊಂಡು ತಮ್ಮನ್ನು ತಾವೇ ಪ್ರತಿಪಾದಿಸುತ್ತಿದ್ದಾರೆ.

ಕಾವ್ಯದಲ್ಲಿ ಉಕ್ಕುತ್ತಿರುವ ಈ ಸಾಮಾಜಿಕ ವಸ್ತು ವಿಷಯಗಳು ಸೌಂದರ್ಯಾನುಭೂತಿ ಮತ್ತು ಔಪಚಾರಿಕ ಲಾವಣ್ಯದಿಂದ ಸಾಂದರ್ಭಿಕವಾಗಿ ಬಂದವು ಎಂದು ವಿಮರ್ಶಕರು ಟೀಕಿಸಿದರೂ ನೇಪಾಳಿ ಕಾವ್ಯದ ವಿಕಾಸವು ತನ್ನ ಒಳಗೊಳ್ಳುವಿಕೆಯಿಂದ ಗಮನಾರ್ಹವಾಗಿದೆ. ಅದು ಯಾವುದೇ ಒಂದು ಬಲಿಷ್ಠ ಸಮುದಾಯ ಅಥವಾ ಲಿಂಗದ ಸ್ವತ್ತಾಗಿ ಈಗ ಉಳಿದಿಲ್ಲ. ಪ್ರಾತಿನಿಧಿಕತೆಯ ದೃಷ್ಟಿಯಿಂದ ಈಗ ಇಡೀ ರಾಷ್ಟ್ರವೇ ಒಂದು ಕಾವ್ಯಾತ್ಮಕ ಅಭಿವ್ಯಕ್ತಿಯಲ್ಲಿ ತೊಡಗಿದೆ ಎಂದು ಧೈರ್ಯವಾಗಿ ಪ್ರತಿಪಾದಿಸಬಹುದು. ನೇಪಾಳಿ ಸಮಾಜ ಕಾವ್ಯವನ್ನು ಸವಾಲು ಹಾಕುವ, ಎದುರಿಸುವ ಮತ್ತು ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸುವ ಮಾಧ್ಯಮವಾಗಿ ಬಳಸುತ್ತಿದೆ. ಜನರ ಧ್ವನಿಯು ಕಾವ್ಯದಲ್ಲಿ ಪ್ರಜಾತಾಂತ್ರೀಕರಣಗೊಳ್ಳುವ ಈ ಪ್ರಕ್ರಿಯೆಯು ನೇಪಾಳಿ ಸಾಹಿತ್ಯದ ಭವಿಷ್ಯದ ಬಗ್ಗೆ ಅಪಾರ ತೃಪ್ತಿ ಹಾಗೂ ಭರವಸೆಯನ್ನು ತಾಳುವಂತೆ ಮಾಡುತ್ತಿದೆ.

◆ **ಭಾರತದಲ್ಲಿ ಇರುವಂತೆ ನೇಪಾಳದಲ್ಲಿಯೂ ಬಹುಸಂಖ್ಯಾತರು ಸಾಂಪ್ರದಾಯಿಕ ಹಿಂದೂ ಮತಾವಲಂಬಿಗಳು. ಅಲ್ಲಿ ಜಾತಿ ಪದ್ಧತಿಯ ಶ್ರೇಣೀಕರಣ ಹೇಗಿದೆ? ಅಧಿಕಾರವನ್ನು ನಿಯಂತ್ರಿಸುವ ಫ್ಯೂಡಲ್ ಸಮುದಾಯ ಒಂದು ಕಡೆ ಮತ್ತು ಸಾಮಾಜಿಕ ರಚನೆಯ ಅಂಚಿನಲ್ಲಿರುವ ಆದಿವಾಸಿ- ದಲಿತ ಸಮುದಾಯಗಳು ಒಂದು ಕಡೆ, ಇವುಗಳ ಒಳ ಸುಳಿಗಳೇನು ಅನಿಸುತ್ತದೆ?**

ಇದನ್ನ ಒಪ್ಪಿಕೊಳ್ಳೋದಕ್ಕೆ ನನಗೆ ಬಹಳ ನಾಚಿಕೆ ಆಗುತ್ತೆ. ಭಾರತದಂತೆಯೇ ನೇಪಾಳದಲ್ಲೂ ಜಾತಿ ಪದ್ಧತಿ ಆಳವಾಗಿ ಬೇರೂರಿದೆ ಮತ್ತು ಈಗಲೂ ಉಗ್ರ ಕಠೋರತೆಯಿಂದ ಆಚರಿಸಲ್ಪಡುತ್ತದೆ. ಈ 21ನೇ ಶತಮಾನದಲ್ಲೂ ಕೂಡ ಅವರ ಜಾತಿಯ ಕಾರಣಕ್ಕಾಗಿ ಜನ ಹಲ್ಲೆಗೆ, ಕೊಲೆಗೆ ಬಲಿಯಾಗುತ್ತಿದ್ದಾರೆ. ಆಗಾಗ ಅತ್ಯಾಚಾರಕ್ಕೆ ಒಳಗಾಗುವ ಅವರಿಗೆ ಸಮಾನ ನ್ಯಾಯ ಸಿಗುವುದಿಲ್ಲ. ಕೋವಿಡ್‌ನ ಸಂದರ್ಭದಲ್ಲಿ ಪ್ರೀತಿಸಿ ಮದುವೆಯಾಗಲು ಮುಂದಾದ ರುಕುಮ್ ಜಿಲ್ಲೆಗೆ ಸೇರಿದ ದಲಿತ ಯುವಕ ಮತ್ತವನ ಐವರು ಸ್ನೇಹಿತರನ್ನು ಕ್ರೂರವಾಗಿ ಕೊಂದು ಅವರ ದೇಹಗಳನ್ನು ನದಿಗೆ ಎಸೆಯಲಾಗಿತ್ತು.

ನೇಪಾಳದ ಜಾತಿ ಆಧಾರಿತ ಕಾನೂನು ಚೌಕಟ್ಟು ಭಾರತದ ಸಾಮಾಜಿಕ ಆಚರಣೆಗಳಿಂದ ಹೆಚ್ಚು ಪ್ರಭಾವಿತವಾಗಿದೆ. 1853ರಲ್ಲಿ, ಪ್ರಧಾನ ಮಂತ್ರಿ ಜಂಗ್ ಬಹದೂರ್ ರಾಣ ಜಾತಿ ವ್ಯವಸ್ಥೆಯನ್ನು ಮುಲುಕಿ ಐನ್ ಎಂಬ ನಾಗರಿಕ ಸಂಹಿತೆಗೆ ಸೇರಿಸುವ ಮೂಲಕ ಔಪಚಾರಿಕಗೊಳಿಸಿದರು. ಇದು ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳನ್ನು 'Salvable' (Masinya) ಮತ್ತು 'Non-Salvable' (Namasinya) ಗುಂಪುಗಳಾಗಿ ವರ್ಗೀಕರಿಸಿದೆ. ಈ ಸಂಹಿತೆ, ಪ್ರಭುತ್ವ ಅಥವಾ ಸಾರ್ವಜನಿಕ ಮತ್ತು ಖಾಸಗಿ ವಿಚಾರಗಳ ವಿರುದ್ಧ ಅಪರಾಧಗಳನ್ನೆಸಗಿದ ಕೆಲವು ಸಮುದಾಯದ ಜನರನ್ನು ಕೂಡಲೇ ಮರಣದಂಡನೆಗೆ ಗುರಿಮಾಡುವ ಅವಕಾಶವನ್ನು ಒದಗಿಸುತ್ತದೆ. ಕಾನೂನು ಉಲ್ಲಂಘಿಸಿ ಅಪರಾಧ ಎಸಗಿದ ಬ್ರಾಹ್ಮಣರು ಮತ್ತು ಕ್ಷತ್ರಿಯರನ್ನು ಶಿಕ್ಷೆಯ ರೂಪದಲ್ಲಿ ದಲಿತರ ಸ್ಥಾನಮಾನಕ್ಕೆ ಇಳಿಸುವ ವ್ಯವಸ್ಥೆಯು ಇಲ್ಲಿದೆ. 1951ರ ತನಕವೂ ಈ ಕ್ರೂರ